## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ .ಎಲ್.ಅನಿಲ್ ಕುಮಾರ್ (ಕೋಲಾರ-ಚಿಕ್ಕಬಳ್ಳಾಪುರ ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯ

**ವಿಷಯ:** ಸ್ವಾತಂತ್ರ್ಯ ದೊರಕಿ 78 ವರ್ಷಗಳು ಕಳೆದರೂ ಕೂಡ ಕೋಲಾರ ಜಿಲ್ಲೆಯ ಕೋಲಾರ ನಗರದಿಂದ 3 ಕಿ.ಮೀ. ದೂರದಲ್ಲಿರುವ ತೇರಹಳ್ಳಿ ಬೆಟ್ಟದಲ್ಲಿರುವ ಕೊಂಡರಾಜನಹಳ್ಳಿ ಪಂಚಾಯಿತಿ ವ್ಯಾಪ್ತಿಯ ಆರೇಳೂ ಹಳ್ಳಿಗಳ ಮನೆ ಮುಂದೆ ಕಾಣ ಸಿಗುವ ದೃಶ್ಯಗಳು ಶೋಚನೀಯ ಸ್ಥಿತಿಯಲ್ಲಿದ್ದು, ಹಲವಾರು ವರ್ಷಗಳಿಂದ ಈ ಭಾಗದಲ್ಲಿ ಶುದ್ಧ ಕುಡಿಯುವ ನೀರಿನ ಸಮಸ್ಯೆ ಉಲ್ಬಣ ಗೊಂಡಿದ್ದು, ಸುಮಾರು 2000 ನಿವಾಸಿಗಳು ಕುಡಿಯಲು ನೀರಲ್ಲದೇ ನೀರಿನ ಬವಣೆ ಎದುರಿಸಿರುತ್ತಾರೆ. ಆ ವ್ಯಾಪ್ತಿಯಲ್ಲಿ ಬರುವ ನೀರು ಹಸಿರು ಬಣ್ಣಕ್ಕೆ ತಿರುಗಿದ್ದು ಪಾಚಿಗಟ್ಟದ ಸ್ಥಿತಯಲ್ಲಿರುತ್ತದೆ. ಈ ನೀರು ಅಲ್ಲಿನ ನಿವಾಸಿಗಳಿಗೆ ಕುಡಿಯಲು ಯೋಗ್ಯ ಸ್ಥಿತಿಯಲ್ಲಿರುವುದಿಲ್ಲ. ಇದರಿಂದ ಆ ಭಾಗದ ನಿವಾಸಿಗಳು ಅನಾರೋಗ್ಯ ಸಮಸ್ಯೆಯನ್ನು ಎದುರಿಸುತ್ತಿದ್ದು, ಸಾಂಕ್ರಾಮಿಕ ಖಾಯಿಲೆಗಳು ಅಲ್ಲಿನ ನಿವಾಸಿಗಳ ಮೇಲೆ ಹತ್ತಿಕೊಂಡಿದ್ದು ಈ ನೀರಿನಲ್ಲಿ ಸ್ನಾನ ಮಾಡಿದರೆ ಮಕ್ಕಳ ಮೈಮೇಲೆ ಗುಳ್ಳೆಗಳು ಬರುತ್ತಿದ್ದು ಇದು ಪೋಷಕರಿಗೆ ನಿದ್ದೆಗೆಡಿಸಿದೆ. ಮಳೆಗಾಲದ ಅವಧಿಯಲ್ಲಿಯೇ ಈ ಸಮಸ್ಯೆ ಇರುವುದಾದಲ್ಲಿ ಇನ್ನೂ ಬೇಸಿಗೆ ಬಂತೆಂದರೆ ಅಲ್ಲಿನ ನಿವಾಸಿಗಳ ಹಾಹಾಕಾರ ಹೇಳ ತೀರದು. ಬೇಸಿಗೆಗಾಲದಲ್ಲಿ ಟ್ಯಾಂಕರ್‌ಗಳಲ್ಲಿ ನೀರು ತಂದು ಬೆಟ್ಟದ ನಿವಾಸಿಗಳಿಗೆ ಸರಬರಾಜು ಮಾಡಬೇಕಾದ ಸ್ಥಿತಿ ಎದುರಾಗುತ್ತದೆ. ಕೆಲವು ದೂರದ ಬಾವಿಗಳ ಬಳಿಗೆ ಹೋಗಿ ಬಿಂದಿಗೆಗಳಲ್ಲಿ ನೀರು ಹೊತ್ತು ತರುತ್ತಿದ್ದು, ಈ ಸಂಬಂಧ ಆ ಭಾಗದ ನಿವಾಸಿಗಳೆಲ್ಲರೂ ನೀರಿನ ಸಮಸ್ಯೆ ಹೇಳಿಕೊಂಡು ಆಕ್ರೋಶ ವ್ಯಕ್ತಪಡಿಸುತ್ತಿರುತ್ತಾರೆ. ಬೆಟ್ಟದಲ್ಲಿನ ತೇರಹಳ್ಳಿ, ಕುಪ್ಪಳ್ಳಿ, ಆದಿಮ(ಶಿವಗಂಗೆ), ಪಾಪರಾಜನಹಳ್ಳಿ, ಕೆಂಚಗೌಡನಹಳ್ಳಿ, ಬೆಟ್ಟಹೊಸಹಳ್ಳಿ ಎಂಬ ಗ್ರಾಮಗಳಿದ್ದು, ಇಲ್ಲಿ ಸುಮಾರು 500 ಮನೆಗಳು ಇದ್ದೂ, ಮೂಲಭೂತ ಸೌಕರ್ಯಗಳ ಕೊರತೆಯನ್ನು ಎದುರಿಸುತ್ತಿವೆ. ಬೆಟ್ಟದಲ್ಲಿ ಕೊಳವೆ ಬಾವಿಯನ್ನು ಕೂಡ ಕೊರೆಯುವಂತಿಲ್ಲ, ಹಾಗೂ ಶುದ್ಧ ನೀರಿನ ಘಟಕವೂ ಸಹ ಇಲ್ಲ ಹಾಗಾಗೀ ಈ ಭಾಗದ ನಿವಾಸಿಗಳು ತುಂಬ ದೂರದ ಕೆರೆ ಬಾವಿ ನೀರನ್ನೇ ನೆಚ್ಚಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ. ಆ ನೀರನ್ನೂ ತಂದರೂ ಸಹ ಡ್ರಮ್‌ಗಳಲ್ಲಿ ಸಂಗ್ರಹಿಸಿಟ್ಟರೆ ಆ ನೀರು ವಾಸನೆ ಬರುವ ಪರಿಸ್ಥಿತಿ ಅಲ್ಲಿ ಬಂದೊದಗಿದೆ. ಇದೇ ನೀರನ್ನೂ ಅಡುಗೆಗೂ ಸಹ ಬಳಸುತ್ತಿದ್ದಾರೆ. ಆದ್ದರಿಂದ ಆ ಭಾಗದ ನಿವಾಸಿಗಳಿಗೆ ನೀರಿನಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಂಬಂಧ ಅತ್ಯವಶ್ಯಕವಾದ ಅನುದಾನವನ್ನು ಬಿಡುಗಡೆ ಮಾಡಿ ಆ ಭಾಗದ ಜನರಿಗೆ ನೀರಿನ ವ್ಯವಸ್ಥೆ ಮಾಡುವಂತೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರನ್ನು ಸದನದ ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:**

ಕೋಲಾರ ತಾಲ್ಲೂಕು, ಕೊಂಡರಾಜನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೇರಹಳ್ಳಿ, ಕುಪ್ಪಹಳ್ಳಿ ಆದಿಮ, ಪಾಪರಾಜನಹಳ್ಳಿ, ಕೆಂಚೇಗೌಡನಹಳ್ಳಿ, ಬೆಟ್ಟಹೊಸಹಳ್ಳಿ, ಇಲ್ಲಿಗೆ ಮೂಲಭೂತ ಸೌಕರ್ಯ ಗಳನ್ನು ಒದಗಿಸಿರುವ ವಿವರ.

1. **ಗ್ರಾಮ ಪಂಚಾಯಿತಿ ವತಿಯಿಂದ ವೆಚ್ಚ ಭರಿಸಿದ ವಿವರ:**

**2024-25ನೇ ಸಾಲಿನ ಯೋಜನೆಗಳ ವಿವರ**

| ಕ್ರ.ಸಂ | ಯೋಜನೆ | ಜಮೆ | ಖರ್ಚು | ಬಾಕಿ |
|---|---|---|---|---|
| 1 | ವರ್ಗ-2 | 3286962 | 2842275 | 444687 |
| 2 | 15ನೇ ಹಣಕಾಸು | 6451076 | 4187236 | 2263840 |
| 3 | ಎಸ್.ಸಿ/ಎಸ್.ಟಿ | 448702 | 185211 | 263491 |
| 4 | ವರ್ಗ-1 | 2533050 | 972153 | 1560897 |
| **ಒಟ್ಟು** | | **12719790** | **8186875** | **4532915** |

**2025-26 ನೇ ಸಾಲಿನ ಯೋಜನೆಗಳ ವಿವರ**

| ಕ್ರ.ಸಂ | ಯೋಜನೆ | ಜಮೆ | ಖರ್ಚು | ಬಾಕಿ |
|---|---|---|---|---|
| 1 | ವರ್ಗ-2 | 1993197 | 1548510 | 444687 |
| 2 | 15ನೇ ಹಣಕಾಸು | 2276148 | 1326656 | 949492 |
| 3 | ಎಸ್.ಸಿ/ಎಸ್.ಟಿ | 314408 | 173941 | 140467 |
| 4 | ವರ್ಗ-1 | 1961549 | 956853 | 1004696 |
| **ಒಟ್ಟು** | | **6545302** | **4005960** | **2539342** |

1. 2024-25ನೇ ಸಾಲಿನಲ್ಲಿ ಕೊಂಡರಾಜನಹಳ್ಳಿ ಗ್ರಾಮ ಪಂಚಾಯಿತಿಗೆ ತಾಲ್ಲೂಕು ಪಂಚಾಯಿತಿ ಅನಿರ್ಬಂಧಿತ ಅನುದಾನದಲ್ಲಿ ರೂ.5.00ಲಕ್ಷಗಳನ್ನು ಒದಗಿಸಲಾಗಿರುತ್ತದೆ.
2. 2025-26 ನೇ ಸಾಲಿನಲ್ಲಿ ಕೊಂಡರಾಜನಹಳ್ಳಿ ಗ್ರಾಮ ಪಂಚಾಯಿತಿಗೆ ತಾಲ್ಲೂಕು ಪಂಚಾಯಿತಿ ಅನಿರ್ಬಂಧಿತ ಅನುದಾನದಲ್ಲಿ ರೂ.10.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ.
3. 2024-25ನೇ ಸಾಲಿನಲ್ಲಿ ಕೊಂಡರಾಜನಹಳ್ಳಿ ಗ್ರಾಮ ಪಂಚಾಯಿತಿಗೆ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕಾಗಿ ರೂ.75.00 ಲಕ್ಷಗಳನ್ನು ಸರ್ಕಾರದಿಂದ ಒದಗಿಸಲಾಗಿರುತ್ತದೆ.

2. **ಸದರಿ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿರುವ ವಿವರ:**

1. ಸದರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಟ್ಟದ ಮೇಲಿನ ತೇರಹಳ್ಳಿ, ಕುಪ್ಪಳ್ಳಿ, ಆದಿಮ(ಶಿವಗಂಗೆ), ಪಾಪರಾಜನಹಳ್ಳಿ, ಕೆಂಚಗೌಡನಹಳ್ಳಿ, ಬೆಟ್ಟಹೊಸಹಳ್ಳಿ ಜನವಸತಿಗಳಿಗೆ ಒಂದೊಂದು ಗ್ರಾಮಕ್ಕೆ ಎರಡು ತೆರದ ಬಾವಿಗಳಿಂದ ಕುಡಿಯಲು ಮತ್ತು ಬಳಕೆಗೆ ಪ್ರತ್ಯೇಕವಾಗಿ ನೀರನ್ನು ಪೂರೈಕೆ ಮಾಡುತ್ತಿದ್ದು, ತೆರೆದ ಬಾವಿಗಳಿಂದ ಬಳಸುವ ನೀರಿನಿಂದ ಸಾರ್ವಜನಿಕರಿಗೆ ಇದುವರೆವಿಗೂ ಯಾವುದೇ ಪರಿಣಾಮ ಉಂಟಾಗಿರುವುದಿಲ್ಲ. ಈಗಾಗಲೇ ಬೆಟ್ಟದ ಅಂಚಿನಲ್ಲಿ ಕೊಳವೆ ಬಾವಿ ಕೊರೆದಿದ್ದು, ಕಾಮಗಾರಿ ಪೂರ್ಣಗೊಂಡಿದ್ದು, ವಿದ್ಯುತ್ ಸಂಪರ್ಕ ಮತ್ತು ಪಂಪ್ ಮೋಟಾರ್ ಹಾಗೂ ತೊಟ್ಟಿ ಅಳವಡಿಸಿದ ತಕ್ಷಣ ಕೊಳವೆ ಬಾವಿ ನೀರನ್ನು ಎಲ್ಲಾ ಗ್ರಾಮಗಳಿಗೆ ಸರಬರಾಜು ಮಾಡಲಾಗುವುದು ಮತ್ತು ಶುದ್ಧ ನೀರಿನ ಘಟಕವು ಸಹ ಪ್ರಗತಿಯಲ್ಲಿರುತ್ತದೆ. ಬೆಟ್ಟದ ಮೇಲಿನ ಗ್ರಾಮಗಳಲ್ಲಿ ಹಾಲಿ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ.

2. ಮುಂದುವರೆದು ಮೇಲೆ ಅಸ್ತಿತ್ವದಲ್ಲಿರುವ ಕೋಲಾರ ತಾಲ್ಲೂಕಿನ ತೇರಹಳ್ಳಿ, ಕುಪ್ಪಳ್ಳಿ, ಆದಿಮ (ಶಿವಗಂಗೆ), ಪಾಪರಾಜನಹಳ್ಳಿ, ಕೆಂಚಗೌಡನಹಳ್ಳಿ, ಬೆಟ್ಟ ಹೊಸಹಳ್ಳಿ ಜನವಸತಿಗಳಿಗೆ ಕುಡಿಯುವ ನೀರಿನ ಮೂಲ ಲಭ್ಯವಿಲ್ಲದಿದ್ದರಿಂದ ಜೆ.ಜೆ.ಎಂ.ನಲ್ಲಿ ಸದರಿ ಗ್ರಾಮಗಳು ಒಳಪಟ್ಟಿರುವುದಿಲ್ಲ.
3. ಸದರಿ ಗ್ರಾಮಗಳು ಬೆಟ್ಟದ ಅಡಿಯಲ್ಲಿರುವ ಕೊಂಡರಾಜನಹಳ್ಳಿ ಗ್ರಾಮಕ್ಕೆ ಹೊಂದಿ ಕೊಂಡಂತ್ತಿದ್ದು, ಸದರಿ ಗ್ರಾಮದಲ್ಲಿ ಬೋರ್ ವೆಲ್ ಕೊರೆಯಲಾಗಿದ್ದು, ಸಫಲಗೊಂಡಿರುತ್ತದೆ. ಸದರಿ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ, 2.00 ಲಕ್ಷ ಲೀಟರ್‌ಗಳ ಸಂಪ್ ನಿರ್ಮಿಸಿ, ಬೆಟ್ಟದ ಮೇಲಿರುವ ತೇರಹಳ್ಳಿ ಗ್ರಾಮದಲ್ಲಿರುವ ಕಲ್ಯಾಣಿಗೆ ಪೈಪ್‌ಲೈನ್ ಮೂಲಕ (3.0 ಕಿ.ಮೀ) ನೀರನ್ನು ಪಂಪ್ ಮಾಡಿ ನೀರನ್ನು ಶೇಖರಣೆಗೊಳಪಡಿಸಿ ನಂತರ ಪೈಪ್‌ಲೈನ್ ಮೂಲಕ ಪಾಪರಾಜನಹಳ್ಳಿಯಲ್ಲಿ ಅಸ್ತಿತ್ವದಲ್ಲಿರುವ ತೆರೆದ ಬಾವಿಯಲ್ಲಿ ಸಂಗ್ರಹಿಸಿ ನಂತರ ಪಂಪ್ ಮಾಡುವ ಮೂಲಕ ಶೇಖರಿಸಬಹುದಾಗಿರುತ್ತದೆ.
4. ಒಂದು ಲಕ್ಷ ಲೀಟರ್ ಸಾಮರ್ಥ್ಯದ ಜಿ.ಎಲ್.ಎಸ್. ಆರ್. ನಿರ್ಮಿಸಿ ಸದರಿ ತೆರೆದ ಬಾವಿಯಿಂದ ನೀರನ್ನು ಪಂಪ್ ಮಾಡಿ ಈಗಾಗಲೇ ಅಸ್ತಿತ್ವದಲ್ಲಿರುವ ಪೈಪ್ ಲೈನ್ ಮೂಲಕ 6 ಜನವಸತಿಗಳಿಗೆ ಕುಡಿಯುವ ನೀರು ಒದಗಿಸಬಹುದಾಗಿರುತ್ತದೆ.
5. ಸದರಿ ಮೂಲ ಸೌಕರ್ಯಗಳನ್ನು ಒದಗಿಸಲು ರೂ.150.00 ಲಕ್ಷಗಳ ಅನುದಾನದ ಅಗತ್ಯವಿರುತ್ತದೆ.

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.